ಶ್ರೀ ಎಂ. ಸಿ. ನಾಣಯ್ಯ (ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೇ, ಹಂಪಿಯ ಸಮಗ್ರ ಯೋಜನೆಗೆ ಸಂಬಂಧಪಟ್ಟ ಹಾಗೆ ಸುಮಾರು 400 ಕೋಟಿ ರೂ.ಗಳ ಒಂದು ಯೋಜನೆಯನ್ನು ಓ.ಇ.ಸಿ.ಎಫ್ - ಜಪಾನಿಗೆ ನೆರವು ಪಡೆಯುವ ಕ್ರಮವನ್ನು ಕೈಗೊಂಡೆವು. ಕಳೆದ ವರ್ಷವೂ ಕೂಡ ವಿವರಗಳನ್ನು ನಾವು ಕಳುಹಿಸಿದಾಗ ಅದಕ್ಕೆ ಅಲ್ಲಿಂದ ಪುರಸ್ಕಾರ ಸಿಗಲಿಲ್ಲ. ಪುನಃ ಈ ವರ್ಷವೂ ಕೂಡ ನಾವು ಕಳುಹಿಸಿದೆವು. 1997-98ನೇ ಸಾಲಿಗೆ ಇದನ್ನು ಆಧ್ಯತೆಯ ಮೇರೆಗೆ ತೆಗೆದುಕೊಳ್ಳಲಿಲ್ಲ. ಇದರ ಪರಿಣಾಮ ಏನಾಗಿದೆ ಅಂದರೆ ಎಕನಾಮಿಕ್ಸ್ ಅಫೈರ್ಸ್ ಡಿಪಾರ್ಟ್‌ಮೆಂಟ್‌ನವರು ಇದನ್ನು ವರ್ಲ್ಡ್ ಟೂರಿಸ್ಟ್ ಆರ್ಗನೈಸೇಶನ್ ಅವರೇ ಕಳುಹಿಸಿ ಯುಎನ್‌ಡಿಎಫ್ ಮೂಲಕ ಇದಕ್ಕೆ ಹಣವನ್ನು ಒದಗಿಸಿಕೊಡುವ ಬಗ್ಗೆ ಕಾರ್ಯಕ್ರಮವನ್ನು ಕೈಗೊಂಡಿದ್ದಾರೆ. ಆದ್ದರಿಂದ ನಾವು ಇದನ್ನು ಕೇಂದ್ರ ಸರಕಾರದ ಮುಖಾಂತರ ಯುಎನ್‌ಡಿಎಫ್‌ನವರ ಹಣದ ಯೋಜನೆಯ ಅಡಿಯಲ್ಲಿ ಈ ಕೆಲಸವನ್ನು ಜಾರಿಗೆ ತರಲು ಮತ್ತು ಕೇಂದ್ರ ಸರಕಾರದವರು ಸೇರಿ ಈ ಕೆಲಸವನ್ನು ಮುಂದುವರಿಸುತ್ತಾ ಇದ್ದೇವೆ. ಬಹುಶಃ ಇದರ ಬಗ್ಗೆ ಮುಂದೆ ನಡೆಯತಕ್ಕಂಥ ಚರ್ಚೆಯಲ್ಲಿ ಕೂಡ ನಾವು ಭಾಗವಹಿಸುತ್ತೇವೆ.

ರಾಜ್ಯದ ಪ್ರತಿ ಜಿಲ್ಲೆಗಳಿಗೆ ಸರಬರಾಜು ಮಾಡಿದ ಕ್ರೀಡಾ ಸಾಮಗ್ರಿಗಳು

312 - ಶ್ರೀ ವಿಶ್ವೇಶ್ವರ ಹೆಗಡೆ (ಅಂಕೋಲ) : ಮಾನ್ಯ ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಯಾವ ಜಿಲ್ಲೆಗೆ ಎಷ್ಟು ಕ್ರೀಡಾ ಸಾಮಾಗ್ರಿಗಳನ್ನು ನೀಡಲಾಗಿದೆ? (ಜಿಲ್ಲಾವಾರು ಮಾಹಿತಿ ನೀಡುವುದು)

ಆ) ಹಾಗಿದ್ದಲ್ಲಿ ಅದಕ್ಕೆ ತಗಲಿದ ವೆಚ್ಚವೆಷ್ಟು?

ಇ) ಉತ್ತರ ಕನ್ನಡ ಜಿಲ್ಲೆಯಲ್ಲಿ ತಾಲ್ಲೂಕುವಾರು ಎಲ್ಲೆಲ್ಲಿ ಎಷ್ಟು ಕ್ರೀಡಾ ಸಾಮಾಗ್ರಿಗಳನ್ನು ನೀಡಲಾಗಿದೆ? (ವಿವರವಾದ ಮಾಹಿತಿ ನೀಡುವುದು)

ಈ) ಸದರಿ ಕ್ರೀಡಾ ಸಾಮಾಗ್ರಿಗಳನ್ನು ನೀಡಲು ಸರ್ಕಾರದ ಮಾರ್ಗಸೂಚಿಗಳೇನು?

ಶ್ರೀ ಅಜಯಕುಮಾರ್ ಸರ್‌ನಾಯಕ್ (ಯುವಜನ ಸೇವಾ ಹಾಗೂ ಕ್ರೀಡಾ ರಾಜ್ಯ ಸಚಿವರು) :

ಅ) 1996-97ನೇ ಸಾಲಿನಲ್ಲಿ ರಾಜ್ಯದ20 ಜಿಲ್ಲೆಗಳಿಗೆ ಜಿಲ್ಲಾವಾರು ಸರಬರಾಜು ಮಾಡಿದ ಕ್ರೀಡಾ ಸಾಮಾಗ್ರಿಗಳ ವಿವರ ಈ ಕೆಳಕಂಡಂತಿದೆ.

1) ಬೇಸಿಗೆ ತರಬೇತಿ ಶಿಬಿರ ನಡೆಸಲು ಅವಶ್ಯಕವಿರುವ ಕ್ರೀಡಾ ಸಾಮಾಗ್ರಿಗಳನ್ನು ಖರೀದಿಸಲು ಪ್ರತಿ ಜಿಲ್ಲೆಗೆ ರೂ. 5000-00 ದಂತೆ ಒಟ್ಟು 1.00 ಲಕ್ಷ ನೀಡಲಾಗಿದೆ.

2) ಪ್ರತಿ ಯುವಕ ಸಂಘಕ್ಕೆ ರೂ. 5000-00ರಂತೆ 3 ಸಂಘಗಳಿಗೆ ಒಟ್ಟು ರೂ. 15,000-00 ಒಟ್ಟು ರೂ. 3.00 ಲಕ್ಷಗಳನ್ನು ನೀಡಲಾಗಿದ್ದು ಸರಬರಾಜು

ಮಾಡಲಾದ ಕ್ರೀಡಾ ಸಾಮಾಗ್ರಿಗಳ ವಿವರ ಕೆಳಕಂಡಂತಿದೆ
(ವಿಶೇಷ ಘಟಕಯೋಜನೆ)

1.	ಕೇರಂ ಬೋರ್ಡ್	1
2.	ವಾಲಿಬಾಲ್	10
3.	ಖೋ-ಖೋ ಕಂಬಗಳು	1 ಜೊತೆ
4.	ಟೆನ್ನಿಕಾಯ್ಟ್	6
5.	ಡಂಬಲ್ಸ್ (ಕಬ್ಬಿಣ)	5 ಜೊತೆ
6.	ಥ್ರೋಬಾಲ್	7
7.	ಸ್ಕಿಪಿಂಗ್ ರೋಪ್	10

3) ಕ್ರೀಡಾಪಟುಗಳ ದೇಹ ತೂಕವನ್ನು ತೂಗಲು ಪ್ರತಿ ಜಿಲ್ಲೆಗೆ ಒಂದು ತೂಕದ ಯಂತ್ರದಂತೆ 20 ಜಿಲ್ಲೆಗಳಿಗೆ 20 ಯಂತ್ರಗಳನ್ನು ರೂ.85,000-00 ಮೊತ್ತದಲ್ಲಿ ನೀಡಲಾಗಿದೆ.

ಆ) ಒಟ್ಟು ಈ ಮೇಲಿನ ಕ್ರೀಡಾ ಸಾಮಾಗ್ರಿಗಳನ್ನು ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ಸರಬರಾಜು ಮಾಡಲು ಈ ಕೆಳಕಂಡಂತೆ ಖರ್ಚು ಮಾಡಲಾಗಿದೆ.

1)	ಬೇಸಿಗೆ ತರಬೇತಿ ಶಿಬಿರ ನಡೆಸಲು ಬೇಕಾದ ಸಾಮಾಗ್ರಿಗಳಿಗೆ	1.00 ಲಕ್ಷ
2)	ವಿಶೇಷ ಘಟಕ ಯೋಜನೆಯಡಿ	3.00 ಲಕ್ಷ
3)	ತೂಕದ ಯಂತ್ರ ನೀಡಲು	0.85 ಲಕ್ಷ
	ಒಟ್ಟು	**4.85 ಲಕ್ಷ**

ಇ) ಉತ್ತರ ಕನ್ನಡ ಜಿಲ್ಲೆಯಲ್ಲಿ ಜಿಲ್ಲಾ ಪಂಚಾಯತ್ ಅಡಿಯಲ್ಲಿ ನೀಡಲಾದ ತಾಲ್ಲೂಕುವಾರು ಸಾಮಾಗ್ರಿಗಳ ವಿವರಗಳನ್ನು ಲಗತ್ತಿಸಲಾಗಿದೆ.

ಈ) ಯಾವುದೇ ಮಾರ್ಗಸೂಚನೆಗಳನ್ನು ಹೊರಡಿಸಲಾಗಿರುವುದಿಲ್ಲ.

ಅನುಬಂಧ

ಉತ್ತರ ಕನ್ನಡ ಜಿಲ್ಲೆಯಲ್ಲಿ ತಾಲ್ಲೂಕುವಾರು ನೀಡಲಾದ ಕ್ರೀಡಾಸಾಮಾಗ್ರಿಗಳ ವಿವರ

ತಾಲ್ಲೂಕು	ಕ್ರೀಡಾ ಸಾಮಾಗ್ರಿಗಳನ್ನು ಪಡೆದ ಯುವಕ ಸಂಘಗಳ ಸಂಖ್ಯೆ	ಪ್ರತಿ ಸಂಘಕ್ಕೆ ಸರಬರಾಜು ಮಾಡಲಾದ ಕ್ರೀಡಾ ಸಲಕರಣೆಗಳ ವಿವರ	
1. ಕಾರವಾರ	6		
2. ಹಳಿಯಾಳ	7		
3. ರೋಯಿಡ	7	1. ವಾಲಿಬಾಲ್	2
4. ಭಟ್ಕಲ್	7	2. ವಾಲಿಬಾಲ್ ನೆಟ್	1
5. ಕುಮುಟ	8	3. ಬ್ಯಾಡ್‌ಮಿಂಟನ್ ರ್ಯಾಕೆಟ್	4
6. ಅಂಕೋಲ	7	4. ಶಟಲ್ ಕಾಕ್ಸ್	1 ಬಾಕ್ಸ್
7. ಮುಂಡಗೋಡ	7	5. ಕೇರಂ ಬೋರ್ಡ್ ಸ್ಟ್ರೈಕರ್ ಮತ್ತು ಪಾನ್‌ಗಳು ಸೇರಿ	1
8. ಹೊನ್ನವರ	8		
9. ಸಿರ್ಸಿ	7		
10. ಯಲ್ಲಾಪುರ	7		
11. ಸಿದ್ದಾಪುರ	9		

ಶ್ರೀ ಕೆ. ವಿಶ್ವೇಶ್ವರ ಹೆಗಡೆ : ಮಾನ್ಯ ಅಧ್ಯಕ್ಷರೇ, ಬಹುಶಃ ಕ್ರೀಡಾ ಸಚಿವರಿಗೆ ರಾಷ್ಟ್ರೀಯ ಕ್ರೀಡಾ ಕೂಟವನ್ನು ಮಾಡುವುದರೊಳಗೇ ತಮ್ಮ ಪೂರ್ಣ ಸಮಯವನ್ನು ವಿನಿಯೋಗಿಸಿಕೊಂಡರು ಎಂದು ಕಾಣುತ್ತದೆ. ಹಾಗಾಗಿ ರಾಜ್ಯದ ಬಗ್ಗೆ ಅವರಿಗೆ ಗಮನ ಕೊಡಲು ಆಗಲಿಲ್ಲ. ರಾಜ್ಯದ ಯುವಕರ ಕ್ರೀಡಾ ವಿಭಾಗದ ಬಗ್ಗೆ ಅವರ ಲಕ್ಷ್ಯ ಸಾಗಲಿಲ್ಲ ಎನ್ನುವುದು ಈ ಉತ್ತರದಿಂದಲೇ ಸ್ಪಷ್ಟವಾಗುತ್ತಾ ಇದೆ. ಏಕೆಂದರೆ, ಒಂದು ವರ್ಷಕ್ಕೆ ಇಡೀ ರಾಜ್ಯಕ್ಕೆ 4 ಲಕ್ಷದ 75 ಸಾವಿರ ರೂ.ಗಳನ್ನು ಕ್ರೀಡಾ ಸಾಮಾಗ್ರಿಗಳನ್ನು ಪಡೆದುಕೊಳ್ಳುವುದಕ್ಕೆ ರಾಜ್ಯ ಸರಕಾರದವರು ಖರ್ಚು ಮಾಡಿದ್ದಾರೆ ಎಂದು ಉತ್ತರದಲ್ಲಿದೆ. ಅಂದರೆ ರಾಜ್ಯ ಸರಕಾರವು ಯುವಕರನ್ನು ಮತ್ತು ಕ್ರೀಡಾಪಟುಗಳನ್ನು ಹೇಗೆ ನಿರ್ಲಕ್ಷ್ಯ ಮಾಡುತ್ತಾ ಇದೆ ಮತ್ತು ಅವರ ಬಗ್ಗೆ ಕಾಳಜಿ ಎಲ್ಲ ಎನ್ನುವುದು ಇದರಿಂದಲೇ ಸ್ಪಷ್ಟವಾಗುತ್ತ ಇದೆ. ಹಾಗಾಗಿ ನಾವು ರಾಷ್ಟ್ರಮಟ್ಟದಲ್ಲಿ, ಅಂತರಾಷ್ಟ್ರೀಯ ಮಟ್ಟದಲ್ಲಿ ನಾವು ಬಹುಮಾನವನ್ನು ಗೋಲ್ಡ್ ಮೆಡಲ್‌ಗಳನ್ನು ತೆಗೆದುಕೊಳ್ಳಬೇಕೆಂದು ಹೇಳುವುದಾದರೆ ಹೇಗೆ ಸಾಧ್ಯ? ಪ್ರಾಥಮಿಕ ಹಂತದಲ್ಲಿಯೇ

ರೀತಿಯ ಸೌಲಭ್ಯಗಳಿಂದ ವಂಚಿತರಾಗಿರುವಾಗ ಹೇಗೆ ಸಾಧ್ಯ? ಹಾಗಾಗಿ ರಾಜ್ಯ ಸರಕಾರ ಯುವಕ-ಯುವತಿ ಮಂಡಳಿಗಳಿಗೆ ಈ ರೀತಿಯಲ್ಲಿ ಕ್ರೀಡಾಸಾಮಗ್ರಿಗಳನ್ನು ಪಡೆದುಕೊಳ್ಳುವುದಕ್ಕೆ ಈಗ ಕೊಡುತ್ತಾ ಇರತಕ್ಕಂಥ ಐದು ಸಾವಿರಗಳ ಬದಲಾಗಿ 25 ಸಾವಿರ ರೂ. ಗಳನ್ನಾಗಿ ಮಾಡುವುದಕ್ಕೆ ಏನಾದರೂ ಯೋಚಿಸುತ್ತಾ ಇದೆಯೇ? ಅಥವಾ ಇದಕ್ಕೆ ಹೆಚ್ಚಿನ ಹಣವನ್ನು ಕೊಡುವುದಕ್ಕೆ ಏನು ಯೋಚನೆ ಮಾಡುತ್ತಾ ಇದೆ ಎಂಬ ಬಗ್ಗೆ ತಿಳಿಸುವಿರಾ?

ಅಧ್ಯಕ್ಷರು : ನಾನು ನಿಮಗೆ ಒಂದು ಸಜೆಶನ್ ಕೊಡುತ್ತೇನೆ. ವಿಶ್ವೇಶ್ವರ ಹೆಗಡೆಯವರೇ, ನೀವುಗಳು ಎಲ್ಲಾರೂ ಪಕ್ಷಾತೀತವಾಗಿ ಯಾರೆಲ್ಲ ಎಂಗ್‌ಸ್ಟರ್ಸ್ ಇದ್ದೀರಿ, ಈ ಸದನದ ಸದಸ್ಯರು ನೀವೆಲ್ಲರೂ ಒಕ್ಕೊರಲಿನಿಂದ ಮುಖ್ಯಮಂತ್ರಿಯವರ ಮೇಲೆ ಈ ಕುರಿತು ಒತ್ತಡವನ್ನು ತರಬೇಕು. ಸ್ಪೋರ್ಟ್ಸ್ ಇಲಾಖೆಗೆ ಗ್ರ್ಯಾಂಟ್‌ನ್ನು ಹೆಚ್ಚು ಮಾಡಬೇಕು. ಅವರಿಗೆ ಬಹಳ ಕಡಿಮೆ ಹಣ ಇರುತ್ತದೆಯಾದುದರಿಂದ ಅವರೇನು ಕೆಲಸ ಮಾಡಲು ಆಗುತ್ತದೆ? ಮಾನ್ಯ ಸಚಿವರು ಎನರ್ಜಿಟಿಕ್ ಆಗಿದ್ದು ಕೆಲಸ ಮಾಡುವುದಕ್ಕೆ ತಯಾರಾಗಿದ್ದಾರೆ. ಪಕ್ಷಾತೀತವಾಗಿ ನೀವೆಲ್ಲಾ ಯುವ ಸದಸ್ಯರುಗಳ ಸ್ಪೋರ್ಟ್ಸ್ ಇಲಾಖೆಗೆ ಹೆಚ್ಚು ಹಣವನ್ನು ಒದಗಿಸಲು ಒತ್ತಡ ತನ್ನಿ. Let him reply, I am just giving this advice to all the members. ಕ್ರೀಡೆಗಳಿಗೆ ಎನ್‌ಕರೇಜ್ ಮಾಡಬೇಕೆಂದರೆ, ಹಾಗೆ ಮಾಡಬೇಕಾಗುತ್ತದೆ.

ಶ್ರೀ ಅಜಯಕುಮಾರ್ ಸರ್‌ನಾಯಕ್ : ಮಾನ್ಯ ಅಧ್ಯಕ್ಷರೆ, ತಾವುಗಳು ಇಲಾಖೆಯ ಬಗ್ಗೆ ನೀಡಿದ ಸಲಹೆಗಾಗಿ ತಮಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ನಾವು ಯುವಕ ಸಂಘಗಳಿಗೆ ಏನು ಅನುದಾನವನ್ನು ಕೊಡುತ್ತಿದ್ದೇವೆ ಇದು ಕೇವಲ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕಂಥ ಯುವಕ ಮಂಡಳಿಗಳಿಗೆ ಕೊಡುತಕ್ಕಂಥ ಅನುದಾನವಾಗಿದೆ. ರಾಜ್ಯದಲ್ಲಿರುವ ಕ್ರೀಡಾ ಮಂಡಳಿಗಳಿಗೆ ಸ್ಪೋರ್ಟ್ಸ್ ಅಥಾರಿಟಿ ಆಫ್ ಕರ್ನಾಟಕದಿಂದ ಅನುದಾನವನ್ನು ಕೊಡುತ್ತಾ ಇದ್ದೇವೆ. ರಾಷ್ಟ್ರಮಟ್ಟದಲ್ಲಿ, ಅಂತರಾಷ್ಟ್ರೀಯ ಮಟ್ಟದಲ್ಲಿ ಅಥವಾ ರಾಜ್ಯಮಟ್ಟದಲ್ಲಿ ನಾವು ಟೂರ್ನ್‌ಮೆಂಟ್ ಕಂಡಕ್ಟ್ ಮಾಡಿದಾಗ, ಅಂಥವರಿಗೆ ನಾವು ಅನುದಾನವನ್ನು ಕೊಡುತ್ತಾ ಇದ್ದೇವೆ. ತಾವುಗಳು ಹೇಳಿದ ಹಾಗೆ ಈಗ ನಾವು ಕ್ರೀಡಾ ಚಟುವಟಿಕೆಗಳಿಗೆ ಕೊಡುತ್ತಿರುವ ಅನುದಾನವು ಕಡಿಮೆ ಇದೆ. ಇದನ್ನು ಹೆಚ್ಚು ಮಾಡುವ ಅವಶ್ಯಕತೆಯು ಇದೆ. ತಾವುಗಳು ಏನು ಸಲಹೆಯನ್ನು ಕೊಟ್ಟಿದ್ದೀರಿ, ಬರುವ ಆಯವ್ಯಯದಲ್ಲಿ ಈ ಇಲಾಖೆಗೆ ಹೆಚ್ಚಿನ ಹಣವನ್ನು ಇಟ್ಟುಕೊಂಡು ಈ ಯುವಕ ಸಂಘಗಳಿಗೆ ಹೆಚ್ಚು ಹಣವನ್ನು ಕೊಡಲು ನಾವು ಪ್ರಯತ್ನ ಮಾಡುತ್ತೇವೆ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ : ಮಾನ್ಯ ಸಚಿವರು ಆ ಕುರಿತು ಯೋಚನೆ ಮಾಡುತ್ತೇವೆಂದು ಹೇಳಿದ್ದಾರೆ. ಮಾನ್ಯ ಅಧ್ಯಕ್ಷರೇ, ತಮ್ಮ ಸಲಹೆಯು ಬಹಳ ಉಪಯುಕ್ತವಾದುದು. ನನ್ನ ಕಾಳಜಿ ಏನೆಂದರೆ, ಸರಕಾರವೇ ಇದನ್ನು ಮುಂದಾಗಿ ಯೋಚನೆ ಮಾಡಬೇಕಾಗಿತ್ತು. ನೀವು ಹೇಳಿದ ನಂತರ, ನಾವೆಲ್ಲಾರೂ ಒತ್ತಾಯ ಮಾಡಿದ ನಂತರ ಇದನ್ನು ಮಾಡುವುದಲ್ಲ. ಸರಕಾರವು ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ರಾಜ್ಯದ ಜನತೆಯು ಮುಂದೆ ಹೋದಾಗ ಏನು ಹೇಳಿದೆ?

ಅಧ್ಯಕ್ಷರು : ಸ್ವಯಂಪ್ರೇರಿತವಾಗಿ ಅವರೆ ಮಾಡಬೇಕಾಗಿತ್ತು ಎಂದು ತಮ್ಮ ಅಭಿಪ್ರಾಯ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ : ಅಷ್ಟೆಲ್ಲಾ ಹೇಳಿಸಿಕೊಂಡು ಮಾಡುತ್ತೇವೆಂದು ಹೇಳುತ್ತಾರೆ. ಮಾಡುತ್ತೇವೆ ಎನ್ನುವ ಒಂದು ನಿಶ್ಚಯ ಭಾವನೆ ಕಾಣುವುದಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ : ಅವರು ಯಾವುದೋ ಕಾಲದಲ್ಲಿ ಇದ್ದಾರೆ. ಸದನದಲ್ಲಿ ಎಲ್ಲಾ ಬಂದು ಇಲ್ಲಿ ಬಡಕೊಂಡರು ಅದರ ಕಡೆ ಗಮನ ಕೊಡುವುದಿಲ್ಲ. ಈಗಲಾದರೂ ಇದಕ್ಕೆ ಪರಿಹಾರ ಕೊಟ್ಟರೆ ದೊಡ್ಡ ಉಪಕಾರ ಎಂದು ತಿಳಿದುಕೊಳ್ಳಬೇಕಾಗುತ್ತದೆ.

ಶ್ರೀ ಅಜಯಕುಮಾರ್ ಸರ್‌ನಾಯಕ್ : ಸನ್ಮಾನ್ಯ ಅಧ್ಯಕ್ಷರೆ, ನಮ್ಮ ಇಲಾಖೆ ಏನು ಇದೆ, ಸ್ಟೇಟ್ ಸೆಕ್ಟಾರ್ ಮತ್ತು ಜಿಲ್ಲಾ ಪಂಚಾಯತ್ ಸೆಕ್ಟಾರ್‌ನಲ್ಲಿ ಕೆಲಸ ಮಾಡುವ ಇಲಾಖೆಯಾಗಿದೆ. ಜಿಲ್ಲಾ ಪಂಚಾಯತ್ ಸೆಕ್ಟಾರ್‌ನಲ್ಲಿ ಕೆಲವೊಂದು ಯೋಜನೆಗಳು ಬಂದಿವೆ. ಈ ಜಿಲ್ಲಾ ಪಂಚಾಯತ್ ಸೆಕ್ಟಾರ್‌ಗಳಲ್ಲಿ ಏನು ಯೋಜನೆಗಳು ಬಂದಿವೆ ಅಲ್ಲಿ ಯೂನಿಫಾರ್ಮಿಟಿ ಇಲ್ಲ. ಕೆಲವೊಂದು ಜಿಲ್ಲಾ ಪಂಚಾಯತ್ ಆಯವ್ಯಯದಲ್ಲಿ ಅವರು ಅನುದಾನ ಇಟ್ಟು ಕೊಳ್ಳುತ್ತಾರೆ. ಕೆಲವರು ಒಂದು ಪರ್ಸೆಂಟು ಇಟ್ಟುಕೊಳ್ಳುತ್ತಾರೆ. ಕೆಲವರು 1.5ಪರ್ಸೆಂಟು ಇಟ್ಟುಕೊಳ್ಳುತ್ತಾರೆ. ಇದರ ಬಗ್ಗೆ ಯೂನಿಫಾರ್ಮಿಟಿ ಮಾಡಿ, ಪ್ರತಿಯೊಂದು ಜಿಲ್ಲಾ ಪಂಚಾಯತ್‌ದವರು ಯುವಜನ ಮತ್ತು ಕ್ರೀಡಾ ಇಲಾಖೆಗೆ ಇಂತಿಷ್ಟು ಯೋಜನಾ ಹಣವನ್ನು ಇಟ್ಟುಕೊಳ್ಳಲೇಬೇಕೆಂದು ನಾನು ಈಗಾಗಲೇ ಆರ್.ಡಿ.ಪಿ.ಆರ್ ಮಂತ್ರಿಗಳ ಜೊತೆ ಮಾಡನಾಡಿದ್ದೇನೆ.

ಮಾನ್ಯ ಸದಸ್ಯರು : ಮಾನ್ಯ ಅಧ್ಯಕ್ಷರೆ, ಯುವಜನ ಮೇಳಗಳು ನಡೆಯುತ್ತದೆ. ಅಲ್ಲಿ ಯುವ ಜನ ಕ್ರೀಡಾ ಇಲಾಖೆ ನಾಮಕಾವಸ್ಥೆಯಾಗಿದೆ. ಅದಕ್ಕೆ ಕೊಡುಂತಹ ಹಣ ಯಾವುದಕ್ಕೂ ಸಾಲದು. ಕೊಡುವುದಿಲ್ಲ ಅಂತ ಹೇಳಿ ಬಿಡಿ, ನಾವು ಮತ್ತು ಮಕ್ಕಳು ಎಲ್ಲಾ ಸೇರಿ ಕಲೆಕ್ಷನ್ ಮಾಡಿ ಮಾಡುತ್ತೇವೆ ಏನು ತೊಂದರೆಯಾಗುವುದಿಲ್ಲ. ನೀವು ಕೊಡುವುದಾದರೆ ಒಳ್ಳೆಯ ಉದ್ದೇಶದಿಂದ ಒಂದು ವರ್ಷಕ್ಕೆ ನಡೆಯುವಂತಹ ಸಾಂಸ್ಕೃತಿಕ ಮೇಳಗಳು ಅತ್ಯಂತ ಅದ್ದೂರಿಯಾಗಿ ಚೆನ್ನಾಗಿ ನಡೆಯುವ ದೃಷ್ಟಿಯಿಂದ ಹಣದ ವ್ಯವಸ್ಥೆ ಮಾಡಬೇಕು ಜೊತೆಗೆ ಬಹಳ ಪರಿಣಾಮಕಾರಿಯಾಗಿ ಇಲಾಖೆ ಭಾಗವಹಿಸಬೇಕೆಂದು ನಾನು ಹೇಳುತ್ತೇನೆ.

ಶ್ರೀ ಚಂದ್ರಕಾಂತ್ ಬೆಲ್ಲದ್ : ಇದು ಸರ್ಕಾರಿ ಕಾರ್ಯಕ್ರಮ ಮಾಡಿದಂತಾಗುತ್ತದೆಯೇ ಹೊರತಾಗಿ, ಅಲ್ಲಿ ನಿಜವಾಗಿ ಯುವಕರೆ ಇರುವುದಿಲ್ಲ, ಅಲ್ಲಿ ಕಾರ್ಯಕ್ರಮಗಳು ನಡೆಯುವುದಿಲ್ಲ. ಉದ್ದೇಶಿತ ಕಾರ್ಯಕ್ರಮ ಏನು ಇದೆ ಅದು ಸಫಲವಾಗುವುದಿಲ್ಲ. ಯುವಕರು ಭಾಗವಹಿಸುತ್ತಿರುವ ಕ್ರೀಡೆಗೆ ಮಹತ್ವ ಇಲ್ಲ. ಆ ದೃಷ್ಟಿಯಿಂದ ಬಹಳ ಸೂಕ್ತ ಸಲಹೆಗಳನ್ನು ಕೊಟ್ಟಿದ್ದಾರೆ,ಮುಖ್ಯಮಂತ್ರಿಗಳು, ಗಮನಹರಿಸಬೇಕು. ರಾಜ್ಯದ ಕ್ರೀಡಾ ಮಂತ್ರಿಗಳು ಬಹಳಷ್ಟು ಗಮನಹರಿಸಬೇಕು. ಅವರ ಉತ್ಸುಕತೆ ಇದೆ ಅಂದರೆ ಅದರಲ್ಲಿ ಹೆಚ್ಚಿನ ಭಾಗ ಯುವಕರಿಗೆ ಹೆಚ್ಚು ಖರ್ಚು ಮಾಡಿ.

ಶ್ರೀ ಅಜಯಕುಮಾರ್ ಸರ್‌ನಾಯಕ್ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಏನು ಸಲಹೆಗಳನ್ನು ಕೊಟ್ಟಿದ್ದಾರೆ. ತಾಲ್ಲೂಕಮಟ್ಟದಲ್ಲಿ ನಡೆಸುವಂತೆ ಯುವಜನ ಮೇಳಗಳಿಗೆ 5 ಸಾವಿರ

ರೂಪಾಯಿಗಳನ್ನು ಕೊಡುತ್ತಿದ್ದೇವೆ, ಜಿಲ್ಲಾ ಮಟ್ಟದಲ್ಲಿ ನಡೆಯುವಂತವುಗಳಿಗೆ 15 ಸಾವಿರ ರೂಪಾಯಿಗಳು, ರಾಜ್ಯಮಟ್ಟದಲ್ಲಿನಡೆಯುವಂತವುಗಳಿಗೆ ಒಂದು ಲಕ್ಷ ರೂಪಾಯಿಗಳನ್ನು ಕೊಡುತ್ತೇವೆ. ಆದರೆ ಇದು ಸಾಲುವುದಿಲ್ಲ ಅಂತ ನಾನು ಒಪ್ಪಿಕೊಳ್ಳುತ್ತೇನೆ. ಇದರಲ್ಲಿ ಲೋಕಲ್ ಪಾರ್ಟಿಷಿಪೇಷನ್ ಬಹಳಷ್ಟು ಇರುತ್ತದೆ. ಸ್ಥಳೀಯವಾಗಿ ಈ ಯುವಜನ ಮೇಳಗಳನ್ನು ಕಂಡಕ್ಟ್ ಮಾಡುತ್ತಿದ್ದೇವೆ. ಮುಂದೆ ಇದಕ್ಕೆ ನಾವು ಹೆಚ್ಚಿನ ಹಣವನ್ನು ಕೊಡಲಿಕ್ಕೆ ಪ್ರಯತ್ನ ಮಾಡುತ್ತೇವೆ.

ಅಧ್ಯಕ್ಷರು : ಈಗ ಪ್ರಶ್ನೋತ್ತರ ವೇಳೆಯು ಮುಗಿಯಿತು, ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು, ಪಟ್ಟಿ ಸಂಖ್ಯೆ 21.

ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ. ಸಿ. ನಾಣಯ್ಯ (ಕಾನೂನು ಸಚಿವರು) : ಮಾನ್ಯ ಅಧ್ಯಕ್ಷರೆ, ಲಿಖಿತ ಮೂಲಕ ಉತ್ತರಿಸುವ 21ನೇ ಪಟ್ಟಿಯಲ್ಲಿರುವ ಒಟ್ಟು 40 ಪ್ರಶ್ನೆಗಳ ಪೈಕಿ 37 ಪ್ರಶ್ನೆಗಳಿಗೆ ಉತ್ತರವನ್ನು ಸದನದಲ್ಲಿ ಮಂಡಿಸುತ್ತೇನೆ.

ಬಳ್ಳಾರಿ ಜಿಲ್ಲೆಯಲ್ಲಿ ಖಾಸಗಿ ವಲಯಕ್ಕೇ ಪ್ರಸ್ತಾಪಿಸಿರುವ ಪ್ರವಾಸೋದ್ಯಮ ಯೋಜನೆಗಳು

1661 - ಶ್ರೀ ಅಲ್ಲಂ ವೀರಭದ್ರಪ್ಪ (ಕುರುಗೋಡು) : ಮಾನ್ಯ ಪ್ರವಾಸೋದ್ಯಮ, ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಳ್ಳಾರಿ ಜಿಲ್ಲೆಯಲ್ಲಿ ಖಾಸಗಿ ವಲಯಕ್ಕೆ ಪ್ರಸ್ತಾಪಿಸಿರುವ ಪ್ರವಾಸೋದ್ಯಮ ಯೋಜನೆಗಳಾವುವು?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಪ್ರವಾಸೋದ್ಯಮ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು):

ಅ) ಇದುವರೆವಿಗೆ ಯೋಜನೆಗಳನ್ನೂ ಖಾಸಗಿ ವಲಯಕ್ಕೆ ಪ್ರಸ್ತಾಪಿಸಿರುವುದಿಲ್ಲ.

ರಾಜ್ಯದಲ್ಲಿ ನಬಾರ್ಡ್ ಸಹಾಯದಿಂದ ಕೈಗೆತ್ತಿಕೊಳ್ಳಲಾದ ರಸ್ತೆಗಳು

1662 - ಶ್ರೀ ಯು. ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಲೋಕೋಪಯೋಗಿ ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ನಬಾರ್ಡ್ ಸಹಾಯದಿಂದ ಕೈಗೆತ್ತಿಕೊಳ್ಳಲಾದ ರಸ್ತೆಗಳು ಯಾವುವು? ಹಾಗೂ ಆ ಬಗ್ಗೆ ಬಿಡುಗಡೆಯಾದ ಹಣದ ವಿವರ ನೀಡುವುದು.

ಶ್ರೀ ಸಿ. ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ನಬಾರ್ಡ್ ಸಾಲ ನೆರವಿನಲ್ಲಿ 119 ರಸ್ತೆ ಕಾಮಗಾರಿಗಳು ನಬಾರ್ಡ್‌ನಿಂದ ಒಪ್ಪಿತವಾಗಿದ್ದು ವಿವರವನ್ನು ಅನುಬಂಧದಲ್ಲಿ ನೀಡಿದೆ ಇದುವರೆವಿಗೂ ಹಣ ಬಿಡುಗಡೆಯಾಗಿರುವುದಿಲ್ಲ. (119 ರಸ್ತೆಗಳು - ಮೊತ್ತ 77.38 ಕೋಟಿ ರೂ.ಗಳು)